**ಓ.ಎಸ್. ನಂ. 9/2019** **ಡಿ.ಡಬ್ಲ್ಯೂ- 2**

**<u>ಸಾಕ್ಷಿಯನ್ನು ದಿನಾಂಕ 29.11.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಂ.ಪಿ ವಕೀಲರಿಂದಃ</u>

ನಾನು ಮತ್ತು ವಾದಿ ಒಂದೇ ಕುಟುಂಬದವರು ಎಂದರೆ ಸರಿಯಲ್ಲ. ವಾದಿಯು ನನ್ನ ದೊಡ್ಡಪ್ಪನ ಮಗ ಎಂದರೆ ಸರಿಯಲ್ಲ. ವಾದಿಯು ಯಾವ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ವಕೀಲರ ಮೂಲಕ ವಾದಿಯು ಯಾವ ಕಾರಣಕ್ಕೆ ದಾವೆಯನ್ನು ಹೂಡಿರುತ್ತಾರೆ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ಲಿಖಿತ ಹೇಳಿಕೆಯನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನು ನೀಡಿರುವುದಿಲ್ಲ. ಲಿಖಿತ ಹೇಳಿಕೆ ಸಲ್ಲಿಸಲು ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾತನ ಹೆಸರು ಗುಜ್ಜನಾಯಕ ಅಲಿಯಾಸ್ ಗುಜ್ಜಾರಿ ಎಂದರೆ ಸಾಕ್ಷಿದಾರರು ಗುಜ್ಜನಾಯಕ ಎನ್ನುವರು. ನನ್ನ ಅಜ್ಜನನ್ನು ಊರಿನಲ್ಲಿ ಗುಜ್ಜಾರಿ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜನಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿದಾರರು ನನ್ನ ತಂದೆ ಕೆಂಪನಾಯಕ ಒಬ್ಬನೇ ಮಗ ಎನ್ನುವರು. ನನ್ನ ಅಜ್ಜನಿಗೆ 3 ಜನ ಮಕ್ಕಳಿದ್ದು ಅವರ ಹೆಸರು ಗುಜ್ಜನಾಯಕ, ಕೋಣನಾಯಕ ಮತ್ತು ಕೆಂಪನಾಯಕ ಎಂದರೆ ಸರಿಯಲ್ಲ. ನನ್ನ ತಂದೆಗೆ ನಾವು 5 ಜನ ಮಕ್ಕಳು ಎಂದರೆ ಸಾಕ್ಷಿದಾರರು 8 ಜನ ಮಕ್ಕಳು ಎನ್ನುವರು. ಕೋಣನಾಯಕರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯ ತಾತನಿಗೆ ಗುಜ್ಜನಾಯಕ ಎಂಬ ಒಬ್ಬನೇ ಮಗ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಗುಜ್ಜನಾಯಕನಿಗೆ ನನ್ನ ತಂದೆ ಒಬ್ಬನೇ ಮಗ ಎನ್ನುವರು. ನಮ್ಮ ಊರಿನಲ್ಲಿ ನನ್ನ ತಾತನನ್ನು ಗುಜ್ಜನಾಯಕ ಅಲಿಯಾಸ್ ಗುಜ್ಜಾರಿ ಎಂದು ಕರೆಯುತ್ತಾರೆ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯಲ್ಲಿ ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳು ನಮ್ಮ ಕುಟುಂಬಸ್ಥರು, ಅವರ ನಡುವೆ ಹಿಂದೆಯೇ ವಿಭಾಗವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಿಜ ವಿಚಾರ ಗೊತ್ತಾಗುತ್ತದೆ ಎಂದು ಗುಜ್ಜನಾಯಕನಿಗೆ ನನ್ನ ತಂದೆ ಒಬ್ಬ ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮನೆ, ಕೋಣನಾಯಕರ ಮನೆ ಹಾಗೂ ವಾದಿಯರ ಮನೆ ಅಕ್ಕಪಕ್ಕ ಇರುತ್ತದೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುವ ಜಮೀನಿನ ಪಕ್ಕದಲ್ಲಿ ಕೋಣನಾಯಕ ಹಾಗೂ ವಾದಿಯ ಜಮೀನು ಇರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. ಸರ್ವೆ ನಂ.47/1 ರಲ್ಲಿ 4-39 ಎಕರೆ ಜಮೀನು ಇರುತ್ತದೆ. ಸರ್ವೆ ನಂ.48 ರಲ್ಲಿ 7-04 ಎಕರೆ ಜಮೀನು ಇರುತ್ತದೆ. ಮೇಲೆ ಹೇಳಿದ ಜಮೀನಿನ ಖಾತೆಗಳು ನನ್ನ ತಂದೆ ಹಾಗೂ ಅವರ ಸಹೋದರರ ಹೆಸರಿನಲ್ಲಿ ಜಂಟಿ ಖಾತೆಯಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆಯ ಮಕ್ಕಳ ಹೆಸರು ದೊಡ್ಡನಾಯಕ, ಕೆಂಪನಾಯಕ, ಚಾಮನಾಯಕ, ಕೆಂಪಾಲಮ್ಮ ಮತ್ತು ಚಾಮಮ್ಮ ಆಗಿರುತ್ತದೆ ಎಂದರೆ ಸಾಕ್ಷಿದಾರರು ಕೋಣನಾಯಕ, ಕೆಂಪದೇವಮ್ಮ, ದೊಡ್ಡನಾಯಕ, ಚಾಮಮ್ಮ, ಕೆಂಪನಾಯಕ, ಚಾಮನಾಯಕ, ಕೆಂಪಾಲಮ್ಮ ಮತ್ತು ಕೆಂಪಮ್ಮ ಎನ್ನುವರು. ನನ್ನ ತಾಯಿಯ ಹೆಸರು ಶೀರಮ್ಮ ಆಗಿರುತ್ತದೆ. ನನ್ನ ಅಣ್ಣ ಕೆಂಪನಾಯಕನು ಒಟ್ಟು ಕುಟುಂಬದ ಆಸ್ತಿಯ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿದಾರರು ನಮ್ಮ ಜಮೀನಿನ ಮೇಲೆ ತೆಗೆದುಕೊಂಡಿರುತ್ತಾರೆ ಎನ್ನುವರು. ನನ್ನ ಅಣ್ಣ ಸಾಲ ತೆಗೆದುಕೊಂಡಿರುವ ಜಮೀನಿನ ಸರ್ವೆ ನಂ.47 ಆಗಿರುತ್ತದೆ. ಸದರಿ ಸಾಲವನ್ನು ಮರುಪಾವತಿ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಕೆಂಪನಾಯಕ ಈ ದಿನ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ನನ್ನ ತಂದೆ ತೀರಿಕೊಂಡು 15 ವರ್ಷವಾಗಿರುತ್ತದೆ. ನನ್ನ ಅಣ್ಣ ಕೆಂಪನಾಯಕ ತೀರಿಕೊಂಡಿರುವ ತನ್ನ ತಂದೆಯ ಹೆಸರಿನಲ್ಲಿ ಸಾಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ವಾದಿಯು ಪ್ರಶ್ನಿಸಿದಾಗ ನಾನು ಮತ್ತು ನನ್ನ ಸಹೋದರರು ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ.47/1 ರ ಜಮೀನಿನ ಪಹಣಿಯಲ್ಲಿ ನನ್ನ ತಂದೆಯ ತಂದೆಯ ಹೆಸರು ಗುಜ್ಜನಾಯಕ ಎನ್ನುವ ಬದಲು ದೊಡ್ಡಕೆಂಪನಾಯಕ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ23 ರಲ್ಲಿ ನನ್ನ ತಂದೆಯ ತಂದೆ ಹೆಸರು ದೊಡ್ಡಕೆಂಪನಾಯಕ ಎಂದು ತಪ್ಪಾಗಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ಸದರಿ ತಪ್ಪಾಗಿರುವ ಪಹಣಿಯನ್ನು ಸರಿಪಡಿಸಲು ಹುಣಸೂರು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ನಾನು ಮತ್ತು ನನ್ನ ಸಹೋದರರು ಪಕ್ಷಗಾರರು ಎಂದರೆ ಸರಿಯಲ್ಲ. ಹಿಂದೆಯೇ ವಿಭಾಗವಾಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರು ವುದಿಲ್ಲ. ವಿಭಾಗವಾಗಿ ಖಾತೆ ಬದಲಾವಣೆಯಾಗಿರುವ ಬಗ್ಗೆ ಯಾವುದೇ ಪಹಣಿಯನ್ನು ಹಾಜರುಪಡಿಸಿರುವುದಿಲ್ಲ. ಯಾವುದೇ ವಿಭಾಗವಾಗಿರುವುದಿಲ್ಲ, ನಾನು ವಕೀಲರಿಗೆ ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.47/1 ರಲ್ಲಿ ತಪ್ಪಾಗಿ ನಮೂದಾಗಿರುವ ವಿವರಗಳನ್ನು ದುರುಪಯೋಗಪಡಿಸಿಕೊಂಡು ಜಮೀನನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜ ಗುಜ್ಜನಾಯಕನಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂಬ ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ತಾತ ಗುಜ್ಜನಾಯಕನಿಗೆ ಒಬ್ಬನೇ ಮಗ ಗುಜ್ಜನಾಯಕನಿದ್ದು ನಾನು ವಾದಿಯ ತಾತ ಗುಜ್ಜನಾಯಕನಿಗೆ ಬೇರೆ ಮಕ್ಕಳು ಸಹ ಇರುತ್ತಾರೆ ಎಂದು ಲಿಖಿತ ಹೇಳಿಕೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ವಿರುದ್ಧ ದಾವೆ ಸಲ್ಲಿಸಿದ್ದರಿಂದ ನಿಜ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳು ಗುಜ್ಜನಾಯಕನ 3 ಜನ ಮಕ್ಕಳಿಗೆ ಸಮನಾಗಿ ಭಾಗವಾಗಬೇಕು ಎಂದರೆ ಸಾಕ್ಷಿದಾರರು ವಾದಿಯ ಕುಟುಂಬವೇ ಬೇರೆ, ನಮ್ಮ ಕುಟುಂಬವೇ ಬೇರೆ ಎನ್ನುವರು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.